# ಸೋಮಾರಿತನದ ಫಲ



ಒಂದು ಊರಿನಲ್ಲಿ ಒಬ್ಬ ರೈತನಿದ್ದ. ಕಡು ಬಡತನ ಅವನನ್ನು ಸದಾ ಕಾಡುತ್ತಿತ್ತು. ಅವನು ಸದ್ಗುಣಿಯಾಗಿದ್ದರೂ ಅವನಲ್ಲಿ ಸೋಮಾರಿತನ ಮನೆ ಮಾಡಿತ್ತು. ಜೊತೆಗೆ ಅವನು ತುಂಬಾ ಕನಸುಗಳನ್ನು ಕಾಣುತ್ತಿದ್ದನು. ಒಮ್ಮೆ ಸಂತನೊಬ್ಬ ಅವನ ಮನೆಗೆ ಬಂದನು. ರೈತ ಮತ್ತು ಅವನ ಹೆಂಡತಿ ಆ ಸಂತನನ್ನು ಪ್ರೀತ್ಯಾದರಗಳಿಂದ ಸ್ವಾಗತಿಸಿ ಸತ್ಕರಿಸಿದರು. ಅವರ ಸೇವೆಯಿಂದ ಸಂತೃಪ್ತನಾದ ಆ ಸಂತ ರೈತನಿಗೆ ಒಂದು ಬಣ್ಣದ ಕೋಲನ್ನು ಕೊಟ್ಟು 'ನೀವು ನನ್ನನ್ನು ಅತಿಥಿಯಂತೆ ಸ್ವಾಗತಿಸಿ ಸೇವೆ ಮಾಡಿ ನನ್ನನ್ನು ಸಂತೃಪ್ತಿಗೊಳಿಸಿದ್ದೀರಿ. ಇದು ಮಂತ್ರದ ಕೋಲು. ಇದರಿಂದ ನೀವು ಅಪಾರ ಸಂಪತ್ತನ್ನು ಗಳಿಸಿಕೊಂಡು ನಿಮ್ಮ ಬಡತನವನ್ನು ನಿವಾರಿಸಿಕೊಳ್ಳಬಹುದು. ಆದರೆ ಒಂದು ವಿಷಯ ನೆನಪಿಟ್ಟುಕೊಳ್ಳಿ. ನಾನು ಪುನಃ ನಾಳೆ ಬೆಳಿಗ್ಗೆ ಬಂದು ಈ ಮಂತ್ರದ ಕೋಲನ್ನು ತೆಗೆದುಕೊಂಡು ಹೋಗುತ್ತೇನೆ, ಅಷ್ಟರೊಳಗೆ ನೀವು ಇದರ ಸದ್ಬಳಕೆಯನ್ನು ಮಾಡಿಕೊಳ್ಳಬೇಕು' ಎಂದು ಹೇಳಿ ಹೊರಟು ಹೋದನು.

ಆ ಸಂತ ಹೋದ ಮೇಲೆ ರೈತ ಮಂಚದ ಮೇಲೆ ಮಲಗಿಕೊಂಡು 'ಈಗ ನಾನು ಈ ಮಂತ್ರದ ಕೋಲಿನ ಸಹಾಯದಿಂದ ಅಪಾರ ಸಂಪತ್ತಿನ ಒಡಯನಾಗಿ ನನ್ನ ಬಡತನವನ್ನು ನಿವಾರಿಸಿಕೊಳ್ಳಬಹುದು' ಎಂದು ಮನಸ್ಸಿನಲ್ಲೇ ಮಂಡಿಗೆ ತಿನ್ನುತ್ತ ಸ್ವಲ್ಪ ಸಮಯದಲ್ಲೇ ಹಾಗೆಯೇ ನಿದ್ದೆಗೆ ಜಾರಿದನು. ಯಥಾಪ್ರಕಾರ ಅವನು ಕನಸೊಂದನ್ನು ಕಾಣಲಾರಂಭಿಸಿದನು. ಆ ಕನಸಿನಲ್ಲಿ ಅವನಿಗೆ ದೊಡ್ಡ ಅರಮನೆ ಕಾಣಿಸಿತು. ಅವನು ಅಲ್ಲಿಗೆ ಹೋದಾಗ ಹಿಂದಿನ ದಿನ ಅವನ ಮನೆಗೆ ಬಂದಿದ್ದ ಸಂತ ಎದುರಾಗಿ ಕಾಣಿಸಿದನು. ಅದೇ ಸಮಯಕ್ಕೆ ಅವನಿಗೆ ಎಚ್ಚರವಾಯಿತು. ನೋಡಿದರೆ ಬೆಳಗಾಗಿತ್ತು. ಆ ಸಂತ ರೈತನ ಬಳಿಯಿದ್ದ ಮಂತ್ರದ ಕೋಲನ್ನು ತಾನು ಹೇಳಿದಂತೆ ತೆಗೆದುಕೊಂಡು ಹೊರಟು
ಹೋದನು. ರೈತ ಎಷ್ಟು ಬೇಡಿಕೊಂಡರೂ ಆ ಸಂತ ಆ ಕೋಲನ್ನು ರೈತನ ಬಳಿ ಬಿಡಲು ಒಪ್ಪಲಿಲ್ಲ. ಆಗ ರೈತ ಕೈ ಕೈ ಹಿಸುಕಿ ಕೊಳ್ಳುತ್ತ 'ಛೆ! ಎಂತಹ ಕೆಲಸವಾಯಿತು! ನನ್ನ ಸೋಮಾರಿತನದಿಂದ ಸಿರಿವಂತನಾಗುವ ಸುವರ್ಣಾವಕಾಶವನ್ನು ಕಳೆದುಕೊಂಡು ಬಿಟ್ಟೆ. ಮತ್ತೆ ಬಡತನದಲ್ಲೇ ಬೇಯಬೇಕಲ್ಲಾ' ಎಂದು ತನ್ನನ್ನು ತಾನೇ ಹಳಿದುಕೊಂಡನು.

**-ಎಂ.ಕೆ.ಮಂಜುನಾಥ್, ಬೆಂಗಳೂರು**

---



# ಧನ್ಯರು

ಮಾತ, ಪಿತ
ಪ್ರತ್ಯಕ್ಷ ದೇವರು!
ಕಾಮಧೇನು, ಕಲ್ಪವೃಕ್ಷ
ಗುರು, ಹಿರಿಯರು!
ಜೀವನ ಸೋಪಾನಕೆ
ನಮ್ಮ ಜನಪದರು!
ಕನ್ನಡ ಕಾವ್ಯ ಕುಸುಮ
ಪ್ರಸರಿಸಿದ ಕಬ್ಬಿಗರು!
ನೇರ, ನಡೆ, ನುಡಿಯ
ದಿಟ್ಟ ಶರಣರು!
ಅನನ್ಯ, ಅನುಭಾವಿ
ದಾಸವರೇಣ್ಯರು!
ತ್ರಿವಿಧ ದಾಸೋಹಿ
ಮಠಗಳ ಪೂಜ್ಯರು!
ಇಂತಿಪ್ಪ ಕರುನಾಡಲಿ
ಜನಿಸಿದ ನಾವೇ ಧನ್ಯರು!

**-ಕೆ.ಯಂ. ವೀರೇಶ್, ಕೂಡ್ಲಿಗಿ**

## ನಿಮಗೆಷ್ಟು ಗೊತ್ತು

### ಸಾಮಾನ್ಯ ಜ್ಞಾನ ಪರೀಕ್ಷಿಸಿ

1. ನಾಯಿಗಾಗಿ ನಿರ್ಮಿಸಿದ ಶಾಸನ ಯಾವುದು?
2. ಕನ್ನಡದ ಮೊದಲ ಛಂದೋಗ್ರಂಥ.
3. ಕನ್ನಡದ ಮೊದಲ ಸಾಂಗತ್ಯ ಕೃತಿ.
4. ಕರ್ನಾಟಕದ ಏಕೈಕ, ಮೊದಲ ತಾಮ್ರ ಗಣಿ.
5. ರಾಷ್ಟ್ರ ಪ್ರಶಸ್ತಿ ಪಡೆದ ಮೊದಲ ಕನ್ನಡ ಚಿತ್ರ.
6. ಮ್ಯಾಗ್ಸೆಸೆ ಪ್ರಶಸ್ತಿ ಪಡೆದ ಮೊದಲ ಕನ್ನಡತಿ
7. 'ಗಜಲ್'ಗಳನ್ನು ಕನ್ನಡಕ್ಕೆ ಮೊದಲು ತಂದವರು.
8. ಕರ್ನಾಟಕದಲ್ಲಿ ಮೊದಲು ದೂರದರ್ಶನ ಕೇಂದ್ರ ಕಾರ್ಯಾರಂಭ ಮಾಡಿದ್ದು ಎಲ್ಲಿ?
9. ಕನ್ನಡದ ಮೊದಲ ಬಣ್ಣದ ಚಲನ ಚಿತ್ರ

**(ಸಂಗ್ರಹ) ವೀರಯ್ಯ ಬಿ.ಎಂ. ಹಿರೆಹೆಗ್ಡಾಳ್**

1. ಆತಕೂರು ಶಾಸನ 2.ನಾಗವರ್ಮನ ಛಂದೋಂಬುಧಿ
3. ದೇವರಾಜನ ಸೊಬಗಿನ ಸೋನೆ
4.ಚಿತ್ರದುರ್ಗದ ಇಂಗಳದಾಳ 5. ಬೇಡರ ಕಣ್ಣಪ್ಪ
6. ಕಮಲಾದೇವಿ (ಧಾರೇಶ್ವರ್) ಚಟ್ಟೋಪಾಧ್ಯಾಯ
7. ಶಾಂತರಸ 8.ಗುಲ್ಬರ್ಗದಲ್ಲಿ
9. ಅಮರ ಶಿಲ್ಪಿ ಜಕಣಾಚಾರಿ